ಭದ್ರಾ ಆಧುನೀಕರಣಕ್ಕಾಗಿ ಕೈಗೊಳ್ಳಬೇಕಾದ ತಂತ್ರಜ್ಞಾನ ಹಾಗೂ ಕಾರ್ಯವಿಧಾನ ನಿರ್ಧರಿಸಲು ಶ್ರೀ ಡಿ.ಸಿ. ಕುಲಕರ್ಣಿ, ನಿವೃತ್ತ ಮುಖ್ಯ ಇಂಜಿನಿಯರ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ. ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಮುಂಡರಗಿ ತಾಲ್ಲೂಕು ಬ್ಯಾಲವಾಡಗಿ ತೋಟಗಾರಿಕಾ ಫಾರಂಗೆ ನೀರು ಒದಗಿಸುವುದು

1871(2171): ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಡರಗಿ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮುಂಡರಗಿ ತಾಲ್ಲೂಕಿನ ಬ್ಯಾಲವಾಡಗಿ ತೋಟಗಾರಿಕಾ ಫಾರಂಗೆ ತುಂಗಭದ್ರಾ ನದಿಯಿಂದ ನೀರಾವರಿ ಸೌಲಭ್ಯ ಒದಗಿಸುವ ಬಗ್ಗೆ ಅಂದಾಜು ಪಟ್ಟಿಗೆ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದ್ದಾಗ್ಯೂ ಈವರೆಗೆ ಕಾಮಗಾರಿ ಪ್ರಾರಂಭಿಸದಿರಲು ಕಾರಣವೇನು; ಕಾಮಗಾರಿ ಯಾವಾಗ ಪ್ರಾರಂಭಿಸಾಗುವುದು;

ಆ. ನೀರಾವರಿ ಸೌಲಭ್ಯ ಎಂದಿನಿಂದ ನೀಡಲಾಗುವುದು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ. ಸದರಿ ತೋಟಗಾರಿಕೆ ಕ್ಷೇತ್ರವು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುತ್ತದೆ. ಈ ಕಾಮಗಾರಿಗೆ ತಗಲುವ ಅಂದಾಜು ವೆಚ್ಚದ 57.37 ಲಕ್ಷ ರೂ.ಗಳನ್ನು ಜಿಲ್ಲಾ ಪಂಚಾಯತ್ ಬಿಡುಗಡೆ ಮಾಡಬೇಕಾಗಿರುವುದರಿಂದ ಕೂಡಲೇ ಇದನ್ನು ನೀಡಲು ಸೂಚಿಸಲಾಗಿದೆ. ಈ ಹಣ ಬಿಡುಗಡೆಯಾದ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಆ. ಕಾಮಗಾರಿ ಮುಕ್ತಾಯವಾದ ಕೂಡಲೇ ಸದರಿ ತೋಟಗಾರಿಕೆ ಕ್ಷೇತ್ರಕ್ಕೆ ನೀರು ಹರಿಸಲಾಗುವುದು.

ಬಾಗಲಕೋಟೆ ಸಹಕಾರಿ ನೂಲಿನ ಗಿರಣಿಯನ್ನೂ ಖಾಸಗಿಯವರಿಗೆ ಮಾಡುವುದರ ಬಗ್ಗೆ

1873(2295): ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಲವಾರು ವರ್ಷಗಳಿಂದ ಸ್ಥಗಿತಗೊಂಡಿರುವ ಬಾಗಲಕೋಟೆ ಸಹಕಾರಿ ನೂಲಿನ ಗಿರಣಿಯನ್ನು ಖಾಸಗಿಯವರಿಗೆ ಮಾರಾಟ ಮಾಡುವ ಪ್ರಕ್ರಿಯೆ ನಡೆದಿದೆಯೇ;

ಆ. ಹಾಗಿದ್ದಲ್ಲಿ, ಈ ಪ್ರಕ್ರಿಯೆ ಯಾವ ಹಂತದಲ್ಲಿದೆ; ಮಾರಾಟಕ್ಕೆ ಸರ್ಕಾರದ ಮತಿಯಿಂದ ಘೋಷಣೆ ಮಾಡಲಾದ ಮೊತ್ತವೆಷ್ಟು;

ಇ. ಸದರಿ ಗಿರಣಿಯ ಬೇರೆ ಬೇರೆ ವಿಭಾಗಗಳ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಇಂಜಿನ್‌ಗಳ ಬಿಡಿಭಾಗಗಳನ್ನು ಇಲಾಖೆಯ ಅಧಿಕಾರಿವರ್ಗ ಶಾಮೀಲಾಗಿ ಕಳ್ಳತನ ಮಾಡಿಸಲಾಗಿದೆ ಎನ್ನುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಗಿರಣಿಯು ಸ್ಥಗಿತಗೊಳ್ಳುವ ಸಮಯದಲ್ಲಿ ಹಾಗೂ ಇಂದು ಮಾರಾಟಕ್ಕೆ ತೆಗೆದಿರುವ ಸಂದರ್ಭದಲ್ಲಿ, ಕಳುವಾದ ವಸ್ತುಗಳು ಯಾವುವು; ಅವುಗಳ ಮೌಲ್ಯವೇನು; ವಿವರ ನೀಡುವುದು.

ಉ. ಬಿಡಿಭಾಗ ಕಳುವಿನ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ವಿವರ ನೀಡುವುದು;

ಊ. ಮಾರಾಟದ ನಂತರ ಗಿರಣಿ ಕಾರ್ಮಿಕರಿಗೆ, ಮಾರಾಟ ಹಣದಲ್ಲಿ ಎಷ್ಟು ಶೇಕಡಾ ಹಣವನ್ನು ನೀಡಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ. ಹೌದು

ಆ. ಮಾರಾಟ ಮಾಡಲು ಟೆಂಡರ್‌ಗಳನ್ನು ಕರೆಯಲಾಗಿದೆ. ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಟೆಕ್ಸಾಸ್ ತಾಂತ್ರಿಕ ಸಂಸ್ಥೆಯಿಂದ ಗಿರಣಿಯ ಆಸ್ತಿಪಾಸ್ತಿಗಳ ಮೌಲ್ಯಮಾಪನ ಮಾಡಿಸಲಾಗಿದೆ. ಅದರ ಮೌಲ್ಯ ರೂ. 316.40 ಲಕ್ಷಗಳೆಂದು ನಿಗದಿಪಡಿಸಿರುತ್ತಾರೆ.

ಇ. ಇಲ್ಲ

ಈ. ಉದ್ಭವಿಸುವುದಿಲ್ಲ.

ಉ. ಉದ್ಭವಿಸುವುದಿಲ್ಲ.

ಊ. ಗಿರಣಿಯ ಆಸ್ತಿಪಾಸ್ತಿಗಳನ್ನು ಮಾರಾಟ ಮಾಡಿದ ನಂತರ ಸರ್ಕಾರದಿಂದ ಅನುಮೋದನೆ ಪಡೆದಿರುವ ಆದತ್ಯಾಪಟ್ಟಿಯ ಪ್ರಕಾರ ಮತ್ತು ಸಹಕಾರ ಸಂಘಗಳ ನಿಯಮ 33ರನ್ನು ಓದಿಕೊಂಡು ಹಾಗೂ ಸಂಸ್ಥೆ ನಿಯಮ ಮತ್ತು ಬೈಲಾಗಳನ್ವಯ ವಿತರಿಸಲಾಗುವುದು.

ಬಾಗಲಕೋಟೆಯರುವ ಆರ್ಯ ವೈಶ್ಯ ಸಹಕಾರಿ ಬ್ಯಾಂಕಿನಲ್ಲಿಟ್ಟಿರುವ ಠೇವಣಿ

1875(2303): ಶ್ರೀ ಪೂಜಾರ್ ಪಿ.ಹೆಚ್ (ಬಾಗಲಕೋಟೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬಾಗಲಕೋಟೆಯಲ್ಲಿರುವ ಆರ್ಯ ವೈಶ್ಯ ಸಹಕಾರಿ ಬ್ಯಾಂಕಿನ ಶಾಖೆಯಲ್ಲಿ ಗ್ರಾಹಕರು ಇಟ್ಟಿರುವ ಠೇವಣಿ ಹಣವೆಷ್ಟು; ಈ ಠೇವಣಿ ಹಣದಲ್ಲಿ ಗ್ರಾಹಕರಿಗೆ ನೀಡಿರುವ ಸಾಲ ಹಾಗೂ ಹುಬ್ಬಳ್ಳಿಯ ಪ್ರಧಾನ ಕಛೇರಿಯಲ್ಲಿ ಇಟ್ಟಿರುವ ಠೇವಣಿ ಎಷ್ಟು?

ಆ. ಪ್ರಧಾನ ಕಛೇರಿಯಲ್ಲಿಟ್ಟಿದ್ದ ಠೇವಣಿ ಹಣದ ಪೈಕಿ ಧಾರವಾಡದ ಕೆ ಸಿ ಸಿ ಬ್ಯಾಂಕಿನಲ್ಲಿ ಠೇವಣಿ ಇಡಲಾದ ಹಣವೆಷ್ಟು; ಯಾವ ಯಾವ ಠೇವಣಿಗಳಲ್ಲಿ ಹಣ ಇಡಲಾಗಿದೆ? (ವಿವರ ಒದಗಿಸುವುದು)

ಇ. ಬಾಗಲಕೋಟೆ ಶಾಖೆಯಲ್ಲಿ ಠೇವಣಿ ಇಟ್ಟಿರುವ ಗ್ರಾಹಕರು ಹಣ ವಾಪಸ್ಸು ಮಾಡುವಂತೆ ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ. ಗ್ರಾಹಕರಿಗೆ ಹಣ ವಾಪಸ್ಸು ನೀಡಲು ಧಾರವಾಡದ ಕೆ ಸಿ ಸಿ ಬ್ಯಾಂಕಿನಲ್ಲಿ ಇಟ್ಟಿರುವ ಠೇವಣಿಯನ್ನು ರದ್ದುಗೊಳಿಸಲು ಹಾಗೂ ಸದರಿ ಹಣವನ್ನು ವರ್ಗಾಯಿಸಲು ಸರ್ಕಾರ ಕ್ರಮಗಳನ್ನು ಕೈಗೊಂಡಿದೆಯೇ?

ಉ. ಗ್ರಾಹಕರ ರಕ್ಷಣೆಗೆ ಇದುವರೆಗೂ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ. ಬಾಗಲಕೋಟೆಯಲ್ಲಿರುವ ದಿ ಆರ್ಯ ವೈಶ್ಯ ಸಹಕಾರಿ ಬ್ಯಾಂಕಿನ ಶಾಖೆಯಲ್ಲಿ ಗ್ರಾಹಕರು ಒಟ್ಟು ರೂ. 352.73 ಲಕ್ಷ ಠೇವಣಿ ಇಟ್ಟಿರುತ್ತಾರೆ. ಈ ಠೇವಣಿ ಹಣದಲ್ಲಿ ಒಟ್ಟು ರೂ. 125.20 ಲಕ್ಷ ಸಾಲ ವಿತರಿಸಿದೆ. ಹಾಗೂ ಹುಬ್ಬಳ್ಳಿ ಪ್ರಧಾನ ಕಚೇರಿಯಲ್ಲಿ ರೂ. 226.53 ಲಕ್ಷ ಠೇವಣಿ ಇರುತ್ತದೆ.